**MVC-1822/2024** **ಪಿ.ಡಬ್ಲ್ಯೂ-2 (Vijaykumar P.)**

ದಿನಾಂಕಃ **17.07.2026** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ.ಜಿ.ಕೆ.ಪಿ. ವಕೀಲರಿಂದಃ**

ಆ ದಿನ ಮೈಸೂರಿನಿಂದ ಶ್ರೀನಿವಾಸ ಅಗ್ರಹಾರಕ್ಕೆ ಸಂಜೆ 6 ಗಂಟೆ ಸಮಯದಲ್ಲಿ ಬೈಕಿನಲ್ಲಿ ಬರುವಾಗ ಅಪಘಾತ ಆಗಿರುತ್ತದೆ. ಮೃತ ಅನಂತಕುಮಾರ್ ರವರು ನಮ್ಮ ಊರಿನವರು. ಮೃತರು ಎಲೆಕ್ಟ್ರಿಕ್ ಸ್ಕೂಟರನ್ನು ನನ್ನ ಮುಂದೆ ಚಲಾಯಿಸಿಕೊಂಡು ಹೋಗುತ್ತಿದ್ದರು. ಅಪಘಾತ ಉಂಟುಮಾಡಿದ ಬಿಳಿ ಬಣ್ಣದ ಮಾರುತಿ ಸ್ವಿಫ್ಟ್ ಕಾರು ಮೈಸೂರು ಕಡೆಯಿಂದ ಬೆಂಗಳೂರು ಕಡೆಗೆ ಹೋಗುತ್ತಿತ್ತು. ನನ್ನಿಂದ 500 ಮೀ. ದೂರದಲ್ಲಿ ಮೃತರು ಚಲಾಯಿಸಿಕೊಂಡು ಹೋಗುತ್ತಿದ್ದ ಬೈಕಿನ ಹಿಂಬದಿಗೆ ಕಾರು ಡಿಕ್ಕಿಪಡಿಸಿರುತ್ತದೆ. ಡಿಕ್ಕಿಯಾದ ನಂತರ ಕಾರನ್ನು ಬದಿಗೆ ನಿಲ್ಲಿಸಲಾಗಿತ್ತು. ಅದರ ನೋಂದಣಿ ಸಂಖ್ಯೆಯನ್ನು ಈಗ ಹೇಳಲು ನೆನಪಾಗುತ್ತಿಲ್ಲ. ಪೋಲೀಸರ ಮುಂದೆ ನಾನು ಈ ಕುರಿತು ನಾನು ಹೇಳಿಕೆ ನೀಡಿರುತ್ತೇನೆ. ಅಪಘಾತ ಉಂಟು ಮಾಡಿದೆ ಎಂದು ಹೇಳಲಾದ ಕಾರು ನಾನು ಹೇಳಿದಂತೆ ಸ್ಕೂಟರ್ ಗೆ ಡಿಕ್ಕಿ ಪಡಿಸಿ ಅಪಘಾತ ಉಂಟು ಮಾಡಿರುವುದಿಲ್ಲ. ಮೃತರು ಸ್ವತಃ ಸ್ಕೂಟರ್ ನಿಂದ ಬಿದ್ದು ಆದ ಗಾಯಗಳಿಂದ ಮೃತರಾಗಿರುತ್ತಾರೆ ಎಂದರೆ ಸರಿಯಲ್ಲ.

2. ಮೃತರನ್ನು ಶ್ರೀರಂಗಪಟ್ಟಣ ಸರ್ಕಾರಿ ಆಸ್ಪತ್ರೆಗೆ ಆಂಬುಲೆನ್ಸ್ ಮುಖಾಂತರ ಕರೆದುಕೊಂಡು ಬಂದಿರುತ್ತೇನೆ. ವೈದ್ಯರು ಪರೀಕ್ಷಿಸಿ ಮರಣ ಹೊಂದಿರುತ್ತಾರೆ ಎಂದು ಘೋಷಿಸಿದರು.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**1 ನೇ ಅಪರ ಹಿರಿಯ ಸಿಜೆ ಮತ್ತು**
**ಎಂ.ಎ.ಸಿ.ಟಿ., ಶ್ರೀರಂಗಪಟ್ಟಣ.**

MVC-1822/2024 ಪಿ.ಡಬ್ಲ್ಯೂ-2 (Vijaykumar P.)

ಸಾಕ್ಷಿದಾರರ ಸಹಿ.